# ಶಹಾಪೂರ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ

**ಬಾಬುರಾಯ ದೊರೆ**

ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರಕಾರಿ ಪ್ರಥಮ ದರ್ಜೆ ಕಾಲೇಜು, ಗುರುಮಠಕಲ್.

DOI: https://doi.org/10.5281/zenodo.16677476

## ABSTRACT:

ಪ್ರಸ್ತುತ ಈ ಲೇಖನದಲ್ಲಿ ಶಾಸನಗಳ ಹಿನ್ನಲೆಯಲ್ಲಿ ಒಂದು ಪ್ರದೇಶದ ಸಾಂಸ್ಕೃತಿಕ ಇತಿಹಾಸವನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಶಹಾಪುರ ತಾಲೂಕು ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಈ ಪ್ರದೇಶವನ್ನು ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಸೇವುಣರು, ಬಹಮನಿಯರು, ಆದಿಲ್ ಶಾಹಿಗಳು, ಸುರಪುರದ ಅರಸರು ಮತ್ತು ಹೈದರಾಬಾದ್ ನಿಜಾಮ ಮುಂತಾದವರು ಆಳಿದ್ದಾರೆ.

ಈ ಪ್ರದೇಶದಲ್ಲಿ ನೂರಾರು ಶಾಸನಗಳು ದೊರಕಿವೆ. ಮುಖ್ಯವಾಗಿ ಅಣಬಿ, ಇಂಗಳಗಿ, ದೋರನಹಳ್ಳಿ, ನಡಾಲ್, ಮದ್ದರಕಿ, ಮರಮಕಲ್, ಮೂಡಬೂಳ, ಸಗರ, ಶಿರವಾಳ, ಸಂಗಮ, ಹೋತಪೇಟೆ ಮತ್ತು ಭೀಮರಾಯನ ಗುಡಿಗಳಲ್ಲಿ ದೊರಕಿರುವ ಶಾಸನಗಳು ತುಂಬಾ ಮಹತ್ವದವುಗಳಾಗಿವೆ. ಎಲ್ಲ ಶಾಸನಗಳು ತಾಲೂಕಿನ ಸಾಂಸ್ಕೃತಿಕ ಇತಿಹಾಸಕ್ಕೆ ಮಹತ್ವದ ಆಕರಗಳಾಗಿ ಮಾಹಿತಿಯನ್ನು ಒದಗಿಸುತ್ತವೆ. ಈ ಮಾಹಿತಿಯ ಹಿನ್ನಲೆಯಲ್ಲಿ ಪ್ರಾಗೈತಿಹಾಸಿಕ ಕುರುಹುಗಳು, ರಾಜಕೀಯ ಇತಿಹಾಸ, ಧಾರ್ಮಿಕ ಇತಿಹಾಸ, ಅಗ್ರಹಾರಗಳು, ಅಳತೆ ಮತ್ತು ನಾಣ್ಯ ಮುಂತಾದ ವಿಷಯಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ.

## KEYWORDS:

ಶಹಾಪುರ, ಮೂಡಬೂಳ, ಅಗ್ರಹಾರಗಳು, ಸುರಪುರದ ಅರಸರು, ಪ್ರಾಗೈತಿಹಾಸಿಕ ನೆಲೆಗಳು, ಶಿರವಾಳ.

ಪ್ರಾದೇಶಿಕವಾಗಿ ಕಲ್ಯಾಣ ಕರ್ನಾಟಕದ ಪ್ರಮುಖ ತಾಲೂಕು ಕೇಂದ್ರವಾಗಿರುವ ಶಹಾಪುರ ಐತಿಹಾಸಿಕ, ಸಾಂಸ್ಕೃತಿಕ, ಸಾಹಿತ್ಯಿಕ, ಭೌಗೋಳಿಕ, ಧಾರ್ಮಿಕ, ರಾಜಕೀಯ ಮತ್ತು ಭಾಷಿಕವಾಗಿ ಮಹತ್ವ ಪಡೆದಿದೆ. ಈ ಪ್ರದೇಶ ಹಲವಾರು ರಾಜ ಮನೆತನಗಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿದೆ. ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಸೇವಣರು, ಬಹಮನಿಗಳು, ಆದಿಲ್ ಶಾಹಿಗಳು, ಸುರಪುರದ ಅರಸರು ಮತ್ತು ಹೈದರಾಬಾದ್ ನಿಜಾಮರು ಈ ಪ್ರದೇಶವನ್ನು ಆಳಿದ್ದಾರೆ.

ಶಹಾಪುರ ತಾಲೂಕು ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಇಲ್ಲಿ ದೊರಕಿರುವ ನೂರಾರು ಶಾಸನಗಳು ಈ ಪ್ರದೇಶ ಪ್ರಾಚೀನ ಕಾಲದಲ್ಲಿ ಪಡೆದುಕೊಂಡಿದ್ದ ಪ್ರಾಮುಖ್ಯತೆಯ ಕುರುಹುಗಳಾಗಿ ಕಾಣಿಸುತ್ತದೆ. ಯಾವುದೇ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯನ್ನು ಅರಿಯುವಲ್ಲಿ ಅವಶ್ಯಕವಾಗಿರುವ ದಾಖಲೆಗಳಲ್ಲಿ ಶಾಸನಗಳಿಗೆ ಮಹತ್ವದ ಸ್ಥಾನವಿದೆ. ಶಹಾಪುರ ತಾಲೂಕನ್ನು ಪ್ರಾದೇಶಿಕ ಮಿತಿಯಾಗಿರಿಸಿಕೊಂಡು, ಇಲ್ಲಿ ದೊರಕಿರುವ ಶಾಸನಗಳ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ಪರಂಪರೆಯನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

ಚಾಣಕ್ಯನ ಅರ್ಥಶಾಸ್ತ್ರದ ಪ್ರಕಾರ 'ಶಾಸ್' ಧಾತುವಿನಿಂದ ಹುಟ್ಟಿದ ಶಾಸನ ಪದದ ಅರ್ಥ ಆಜ್ಞೆ, ರಾಜಾಜ್ಞೆ ಎಂದಾಗುತ್ತದೆ. ಇನ್ನೂ ವಿಸ್ತರಿಸಿ ಹೇಳುವುದಾದರೆ ಶಾಸನಗಳು ಲಿಖಿತ ದಾಖಲೆಗಳು. ಸಾವಿರಾರು ವರ್ಷಗಳವರೆಗೆ ಇರುವಂತವು. ನಮ್ಮ ಹಿಂದಿನವರ ಬದುಕನ್ನು ದಾಖಲಿಸುವ ಯಾವುದೇ ರೀತಿಯ ಬರಹದ ದಾಖಲೆಗಳನ್ನು ಶಾಸನಗಳು ಎನ್ನಬಹುದು. ಇವುಗಳನ್ನು ಬಂಡೆಗಳ ಮೇಲೆ, ತಾಮ್ರಪಟಗಳ ಮೇಲೆ, ಮರದ ಹಲಿಗೆಯ ಮೇಲೆ, ಚರ್ಮದ ಮೇಲೆ ಕೊರೆಯಲಾಗುತ್ತಿತ್ತು. ಬಹುಕಾಲದವರೆಗೆ ಉಳಿಯಬೇಕೆಂಬ ಕಾರಣದಿಂದ ರಚಿಸಲ್ಪಟ್ಟ ಈ ಬರಹಗಳು ತನ್ನ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕನ್ನು ಮುಂದಿನ ತಲೆಮಾರಿಗೆ ಪರಿಚಯಿಸುತ್ತವೆ.

ಶಹಾಪುರ ತಾಲೂಕಿನ ಅನೇಕ ಊರುಗಳಲ್ಲಿ ಶಾಸನಗಳು ದೊರಕಿವೆ. ಅಣಬಿ, ಇಂಗಳಗಿ, ದೋರನಹಳ್ಳಿ, ನಡಾಲ, ಮದ್ದರಕಿ, ಮರಮಕಲ್, ರಸ್ತಾಪುರ, ಸಗರ, ಶಿರವಾಳ, ಸಂಗಮ, ಮೂಡಬೂಳ, ಹೊತಪೇಟೆ ಮತ್ತು ಭೀಮರಾಮನ ಗುಡಿಯ ಶಾಸನಗಳು ಅತ್ಯಂತ ಪ್ರಮುಖವಾಗಿವೆ. ಈ ಎಲ್ಲ ಶಾಸನಗಳು ತಾಲೂಕಿನ ಸಾಂಸ್ಕೃತಿಕ ಇತಿಹಾಸಕ್ಕೆ ಮಹತ್ವದ ಆಕರಗಳಾಗಿ ಮಾಹಿತಿಯನ್ನು ಒದಗಿಸುತ್ತವೆ.

**ಪ್ರಾಗೈತಿಹಾಸಿಕ ಕುರುಹುಗಳು:**

ಶಹಾಪುರ ತಾಲೂಕು ಕೃಷ್ಣ-ಭೀಮೆಯರ ಸಂಗಮ ಸ್ಥಳ. ಎರಡು ನದಿಗಳ

ಇಕ್ಕೆಲಗಳಲ್ಲಿ ಪ್ರಾಗೈತಿಹಾಸಿಕ ಕುರುಹುಗಳನ್ನು ಸಂಶೋಧಕರು ಗುರುತಿಸಿದ್ದಾರೆ. "ಕೈರ್ನ್ಸ್ ಅಥವಾ ಬಾರೋಸ್ ಎಂದು ಕರೆಸಿಕೊಳ್ಳುವ ದೊಡ್ಡ ದೊಡ್ಡ ಬಂಡೆಗಳನ್ನು ವೃತ್ತಾಕಾರವಾಗಿಟ್ಟು ಅವುಗಳ ಕೆಳಗೆ ಗೋರಿಗಳನ್ನು, ಕಲ್ಲಿನ ಮನೆಗಳನ್ನು, ಅವುಗಳಲ್ಲಿ ದೇಹಗಳನ್ನು ಮತ್ತು ಅಂತ್ಯಸಂಸ್ಕಾರದ ಸಾಮಾನುಗಳನ್ನು (ಮಡಿಕೆ ಕುಡಿಕೆಗಳಲ್ಲಿ) ಹುಗಿದಿಡುತ್ತಿದ್ದು, ಇಂತಹ ಕುರುಹುಗಳು ಜೇವರ್ಗಿ, ಆಂದೋಲಾ, ಕೊಡೆಕಲ್, ಹುಣಸಗಿ, ಮಾಲಗುತ್ತಿ, ರಸ್ತಾಪುರ, ಮದ್ದರಿಕಿ, ಚಿಕನಳ್ಳಿ, ನೆಲೋಗಿ, ವಿಭೂತಿ ಹಳ್ಳಿಗಳಲ್ಲಿ ದೊರೆಯುತ್ತವೆ."[1] ಇಲ್ಲಿ ಹೆಸರಿಸಿರುವ ಊರುಗಳಲ್ಲಿ ರಸ್ತಾಪುರ, ಮದ್ದರಕಿ, ವಿಭೂತಿಹಳ್ಳಿಗಳು ಶಹಾಪುರ ತಾಲೂಕಿನ ಗ್ರಾಮಗಳಾಗಿದ್ದು, ಇವು ಈ ಭಾಗದ ಇತಿಹಾಸವನ್ನು 20,000 ವರ್ಷಗಳಷ್ಟು ಹಿಂದಕ್ಕೆ ಕೊಂಡೊಯ್ಯುತ್ತವೆ. ಮೆಗಾಲಿಥಿಕ್ ಯುಗದ ಬೂದಿ ದಿಬ್ಬಗಳು ಬೀರನೂರು, ಕನ್ನೆಕೋಳೂರು, ಹಾರಣಗೇರಿಗಳಲ್ಲಿ ದೊರಕಿವೆ. ಈ ಪ್ರದೇಶಗಳಲ್ಲಿ ಉತ್ಖನನ ಕಾರ್ಯ ಕೈಗೊಂಡರೆ ಪ್ರಾಗೈತಿಹಾಸಿಕ ಕುರುಹುಗಳ ಮೇಲೆ ಇನ್ನೂ ಹೆಚ್ಚಿನ ಬೆಳಕನ್ನು ಚೆಲ್ಲಬಹುದು.

**ರಾಜಕೀಯ ಇತಿಹಾಸ:**

ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿನ ಸನ್ನತಿಯಲ್ಲಿ ಅಶೋಕನ ಕಾಲದ ಬ್ರಾಹ್ಮಿ ಲಿಪಿ ಶಾಸನಗಳು ದೊರಕಿ ಈ ಭಾಗದ ಇತಿಹಾಸ ಕ್ರಿಸ್ತ ಪೂರ್ವ ಮೂರನೇ ಶತಮಾನದಷ್ಟು ಹಿಂದಕ್ಕೆ ಕೊಂಡೊಯ್ದಿವೆ. ಈ ಸನ್ನತಿಯು ಶಹಾಪುರ ತಾಲೂಕಿನ ಗಡಿಗೆ ಹೊಂದಿಕೊಂಡಿದೆ. ಅಶೋಕನ ಆಳ್ವಿಕೆಯ ಕುರುಹುಗಳು ಶಹಾಪುರದಲ್ಲಿ ದೊರಕದೆ ಇದ್ದರೂ ಸನ್ನತಿಯ ಪಕ್ಕದಲ್ಲಿರುವ ಹುರಸಗುಂಡಿಗೆ, ಅಣಬಿ ಮತ್ತು ರೋಜ ಗ್ರಾಮಗಳಲ್ಲಿ ಬೌದ್ಧರ ಅವಶೇಷಗಳಿರುವುದನ್ನು ಗುರುತಿಸಬಹುದು. ಇನ್ನು ಹೆಚ್ಚಿನ ಅಧ್ಯಯನಗಳಾದರೆ ಮೌರ್ಯರು ಈ ಪ್ರದೇಶವನ್ನು ಆಳ್ವಿಕೆ ಮಾಡಿದ್ದರೆನ್ನುವುದನ್ನು ಕಂಡುಕೊಳ್ಳಬಹುದು. ಮೌರ್ಯರ ನಂತರ ಈ ಪ್ರದೇಶವನ್ನು ಶಾತವಾಹನರು ಆಳ್ವಿಕೆ ಮಾಡಿದ್ದರು ಎನ್ನಲು "ಅಣಬಿ ಮತ್ತು ಹುರಸಗುಂಡಿಯಲ್ಲಿ ದೊರಕಿರುವ ಲಿಪಿ ಸಹಿತ ಮತ್ತು ಲಿಪಿ ರಹಿತ ಶಾತವಾಹನ ಸ್ಮಾರಕ ಶಿಲಾಪಲಕಗಳು ಈ ಎಲ್ಲಾ ಕಡೆಗಳಲ್ಲೂ ಶಾತವಾಹನರ ಅಧಿಪತ್ಯವಿತ್ತು ಎನ್ನುವುದಕ್ಕೆ ಸಾಕ್ಷಿಗಳಾಗಿವೆ."[2]

ಕ್ರಿಸ್ತಶಕ 939ರಲ್ಲಿ ಈ ಪ್ರದೇಶ ರಾಷ್ಟ್ರಕೂಟರ ಮೂರನೇ ಕೃಷ್ಣನ ಆಳ್ವಿಕೆಗೆ ಒಳಪಟ್ಟಿರುವುದನ್ನು ಶಿರವಾಳದಲ್ಲಿ ದೊರಕಿರುವ ಶಾಸನ ತಿಳಿಸುತ್ತದೆ. ಈ ಪ್ರದೇಶದಲ್ಲಿ ದೊರಕಿರುವ ಬಹುತೇಕ ಶಾಸನಗಳು ಕಲ್ಯಾಣಿ ಚಾಲುಕ್ಯರ ಕಾಲದವುಗಳೇ ಆಗಿವೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಈ ಪ್ರದೇಶ ಪ್ರಾಮುಖ್ಯತೆಯನ್ನು ಪಡೆದಿತ್ತೆಂದು ಊಹಿಸಬಹುದು. ಕ್ರಿಸ್ತಶಕ 1208ರಲ್ಲಿ ತಡಿಬಿಡಿಯ ಮತ್ತು ಹೋತಪೇಟೆಯ ಶಾಸನ ಸೇವುಣರು ಈ ಪ್ರದೇಶವನ್ನು ಆಳಿದ್ದರೆನ್ನುವುದನ್ನು ತಿಳಿಸುತ್ತದೆ. 'ಶ್ರೀಮತು ಯಾದವ

ನಾರಾಯಣ ಸೇವುಣರಾಯ ಪ್ರತಾಪ ಚಕ್ರವರ್ತಿಯ ಸಿಂಗಣದೇವ[3] ತಡಿಬಿಡಿಯ ಬ್ರಹ್ಮೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟ ವಿಚಾರ ತಿಳಿಸುತ್ತದೆ.

ಕ್ರಿ.ಶ 12 ಶತಮಾನದ ಮರಮಕಲ್4 ಶಾಸನ ಕಲಚೂರಿಗಳು ಈ ಪ್ರದೇಶದಲ್ಲಿ ಆಳ್ವಿಕೆ ಮಾಡಿದ್ದನ್ನು ತಿಳಿಸುತ್ತದೆ. ಹೀಗೆ ವಾರಂಗಲ್ಲಿನ ಕಾಕತಿಯರು, ಬಹಮನಿ ಸುಲ್ತಾನರು, ಆದಿಲ್ ಶಾಹಿಗಳು, ಸುರಪೂರದ ಅರಸರು, ಹೈದರಾಬಾದ್ ನಿಜಾಮರು ಈ ಪ್ರದೇಶಗಳನ್ನು ಆಳ್ವಿಕೆ ಮಾಡಿರುವುದರ ಕುರಿತು ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ.

**ಧಾರ್ಮಿಕ ಇತಿಹಾಸ:**

ಈ ಪ್ರದೇಶವನ್ನು ಆಳಿದ ಪ್ರಥಮ ರಾಜ ಮನೆತನ ಶಾತವಾಹನರದು. ಮೌರ್ಯರ ನಂತರ ಬೌದ್ಧ ಧರ್ಮವನ್ನು ಸ್ವೀಕರಿಸಿ ಅದನ್ನು ಪಸರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಶಹಾಪುರ ತಾಲೂಕಿನ ಹುರಸಗುಂಡಗಿ, ಅಣಬಿ ಮುಂತಾದ ಕಡೆಗಳಲ್ಲಿ ಶಾತವಾಹನರ ಶಾಸನಗಳು ದೊರಕಿರುವುದರಿಂದ ಈ ಪ್ರದೇಶಗಳಲ್ಲಿ ಬೌದ್ಧ ಧರ್ಮ ನೆಲೆಸಿತು ಎನ್ನಬಹುದು.

ಬೌದ್ಧ ಧರ್ಮದಂತೆ ಜೈನ ಧರ್ಮವೂ ಈ ಪ್ರದೇಶದಲ್ಲಿ ನೆಲೆಸಿತ್ತು. 12 ಶತಮಾನದ ಗೋಗಿಯ ಶಾಸನದಲ್ಲಿ

**"ಯಾಪನೀಯ ಸಂಘದ ಪಯೋ**
**ರ್ಗಣದ ಧರ್ಮ್ಮಕೀರ್ತಿದೇವರ**
**ಪ್ರೀಯ ಗುಡುಗಳು ಸಿರಿಸೆಟ್ಟಿಯ ತನುಜ**
**ರಾಮಿಸೆಟ್ಟಿ ಮಾಡಿಸಿದ ಚಂದ್ರನಾಥ"**[4]

ಯಾಪನೀಯ ಸಂಘದ ಉಲ್ಲೇಖ ಮತ್ತು ಜೈನ ಧರ್ಮದ ಇರುವಿಕೆಯನ್ನು ತಿಳಿಸುತ್ತದೆ. ಯಾಪನೀಯ ಸಂಘ ಜೈನ ಶಾಖೆಗಳಾದ ಶ್ವೇತಾಂಬರ ಮತ್ತು ದಿಗಂಬರ ಪ್ರಭೇದಗಳಷ್ಟೇ ಪ್ರಾಚೀನವಾದ ಹಳೆಯ ಪಥವಾಗಿರುವ ಯಾಪನೀಯ ಸಂಘದ ಬಗ್ಗೆ ಈ ಶಾಸನ ಹೇಳುತ್ತದೆ.

ಶೈವಧರ್ಮ ಭರತ ಭೂಮಿಯ ಅತಿ ಪ್ರಾಚೀನ ಧರ್ಮವೆಂದು ಎಲ್ಲ ವಿದ್ವಾಂಸರು ಒಪ್ಪಿರುವ ಸಂಗತಿ. ಈ ಪ್ರದೇಶವನ್ನು ಆಳಿದ ಅನೇಕ ಅರಸು ಮನೆತನಗಳು ಶೈವ ಧರ್ಮವನ್ನು ಸ್ವೀಕರಿಸಿ ಪ್ರೋತ್ಸಾಹಿಸಿದ್ದವು. ಶಹಾಪುರ ತಾಲೂಕಿನಲ್ಲಿ ದೊರಕಿರುವ ಬಹುತೇಕ ಶಾಸನಗಳು ದೇವಸ್ಥಾನಗಳಿಗೆ ನೀಡಿರುವ ದಾನ ಶಾಸನಗಳಾಗಿವೆ. ಶೈವರು ಹಲವು ದೇವಸ್ಥಾನಗಳನ್ನು ಕಟ್ಟಿ ಅನೇಕ ರೀತಿಯ ದತ್ತಿಗಳನ್ನು ಬಿಟ್ಟಿರೋದನ್ನು ಶಾಸನಗಳಲ್ಲಿ ಕಾಣುತ್ತೇವೆ. ಶಿರವಾಳದ 1178ರ

ಶಾಸನದಲ್ಲಿ ಶೈವ ಗುರು ರೇವಣಸಿದ್ಧನನ್ನು ಕುರಿತು ಹೇಳಲಾಗಿದೆ. ಕ್ರಿ.ಶ. 1067ರ ಮೂಡಬೂಳ ಶಾಸನದಲ್ಲಿ "ಸಂಕ್ರಾನ್ತಿಯಂದು ಸಿದ್ದೇಶ್ವರದೇವರ ಭೋಗಕ್ಕೆ ದೇಗುಲದ ಗಡಿಂಬದ ಕೋಲೊಳೆ ಮೂಡಣ ಪೊಲಮೇರೆಯಲ್ಲಿ..."[5] ಎಂದು ಭೂಮಿಯನ್ನು ದತ್ತಿಬಿಟ್ಟ ವಿಚಾರ ತಿಳಿಸುತ್ತದೆ.

ಕ್ರಿ.ಶ. 1070ರ ಸಗರ ಶಾಸನದಲ್ಲಿ "ಲಾಕುಳ ಸಿದ್ಧಾನ್ತ ಶಾಸ್ತ್ರಾರ್ತ್ಥ ಸಮುದ್ಧರಣ ಶೀಲರ್ ಕಾಳಾಮುಖ ಮಹಾವ್ರತ ಪಾಶುಪತ ಶಿವಸಮಯ ಸಮಾನ ಪಕ್ಷಪಾತರ್..."[6] ಎಂದಿದೆ. ಇದರಿಂದ ಈ ಪ್ರದೇಶದಲ್ಲಿ ಬೌದ್ಧ, ಜೈನ ಮತ್ತು ಶೈವ ಧರ್ಮಗಳು ಸಮನ್ವಯದಿಂದ ಬದುಕಿದವು ಎಂದು ಅರಿಯಬಹುದು.

**ಅಗ್ರಹಾರಗಳು:**

ಅಗ್ರಹಾರ ಬ್ರಾಹ್ಮಣರಿಗೆ ದಾನವಾಗಿ ಕೊಡಲಾದ ಹಳ್ಳಿ ಅಥವಾ ಹಳ್ಳಿಯ ಭಾಗ. ಆ ಊರಿನ ಸಕಲ ಸ್ವಾಮ್ಯ ಅಲ್ಲಿ ವಾಸಿಸುವ ಬ್ರಾಹ್ಮಣರಿಗೆ ಸೇರುತ್ತದೆ. ಇಲ್ಲಿ ವಾಸಿಸುವ ಬ್ರಾಹ್ಮಣರು ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಅನುಷ್ಠಾನ, ಜಪ ಮುಂತಾದವುಗಳಲ್ಲಿ ನಿಷ್ಣಾತರಾಗಿ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದರು. ಈ ಅಗ್ರಹಾರಗಳು ಪ್ರಾಚೀನ ಕರ್ನಾಟಕದಲ್ಲಿ ಪ್ರಮುಖ ವಿದ್ಯಾಭ್ಯಾಸ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು. ಶಹಾಪುರ ತಾಲೂಕಿನ ಅಣಬಿ ಮತ್ತು ಮದ್ದರಕಿ ಗ್ರಾಮಗಳು ಪ್ರಾಚೀನ ಕಾಲದಲ್ಲಿ ಅಗ್ರಹಾರಗಳಾಗಿದ್ದವು. 1034ರ ಅಣಬಿ ಶಾಸನವು "ಸಂಕ್ರಾಂತಿಯನ್ದು ಅಗ್ರಹಾರ ಅಳಂಬೆಯ ಕೂಡಲ ಶ್ರೀಮಲ್ಲಿಕಾರ್ಜುನ ದೇವರ್ಗ್ಗೆ ತೋಜೆಯ ಬಡಗದಡಿಯಲಿರ್ಪತ್ತೆಂಟುಗೇಣ ಸಿಂಗನ..."[7] ಎಂದು ಅಗ್ರಹಾರಕ್ಕೆ ನೀಡಿರುವ ದತ್ತಿಯನ್ನು ತಿಳಿಸುತ್ತದೆ. ಕ್ರಿಸ್ತಶಕ 1028ರ ಮದ್ದರಕಿ ಶಾಸನದಲ್ಲಿ "ಶ್ರೀಮದಗ್ರಹಾರಂ ಮಳ್ದರ್ಕ್ಕೆ ಊರೊಡೆಯಂ ಸರ್ವ್ವದೇವ ಭಟ್ಟರ್ ಪ್ರಮುಖ ಮಹಾಜನಮಯ್ನೂರ್ವರುಂ"[8] ಎಂದು ಭೂಮಿ ಮತ್ತು ಭಾವಿಯನ್ನು ಊರಿನ ಬೇರೆ ಬೇರೆ ದಿಕ್ಕುಗಳಲ್ಲಿ ದತ್ತಿಬಿಟ್ಟ ವಿಷಯವನ್ನು ಈ ಶಾಸನ ತಿಳಿಸುತ್ತದೆ. ಈ ಅಗ್ರಹಾರಗಳು ಪ್ರಾಚೀನ ಕಾಲದಲ್ಲಿ ವಿದ್ಯಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುತ್ತಿದ್ದವು.

**ಅಳತೆ ಮತ್ತು ನಾಣ್ಯಗಳು:**

ಪ್ರಾಚೀನ ಕಾಲದಲ್ಲಿ ಭೂಮಿಯನ್ನು ಅಳತೆಗೋಲುಗಳಿಂದ ಅಳೆಯುತ್ತಿದ್ದರು. ಕ್ರಿ.ಶ. 1208ರ ತಡಿಬೀಡಿ ಶಾಸನದಲ್ಲಿ "ಕೋಲಮತ್ತರು 1" ನಂದಾದೀಪಕ್ಕಾಗಿ ಭೂದಾನ ಮಾಡಿದ್ದನ್ನು ತಿಳಿಸುತ್ತದೆ. ದೋರನಹಳ್ಳಿಯ ಶಾಸನದಲ್ಲಿ "ಸಾಸಿರ ಮತ್ತರೊಳಗೆ ಮೊದಲೂರ ಹಾದಿಗೆ ಪೋಪ ಚಿಟ್ಟೆಯ ಬಡಗಣ ಹೊರೆಯಲು ಕಾಸಿಗ ದುಗ್ಗೋಜನ ಮಗಂ ವೋಜಗೆ ಮತ್ತರು 10 ಪತ್ತು ಮನೆ ನಿವೇಸಣ" ಎಂದಿದೆ. ಹೊಲ ಮತ್ತು ಮನೆ ಕಟ್ಟಲು ಜಾಗವನ್ನು ಮತ್ತರುಗಳ ಲೆಕ್ಕದಲ್ಲಿ ಅಳೆಯಲಾಗುತ್ತಿತ್ತು.

ಶಹಾಪುರ ತಾಲೂಕಿನ ಅನೇಕ ಶಾಸನಗಳಲ್ಲಿ 'ಮತ್ತರು', 'ಕೋಲಮತ್ತರು', ಎನ್ನುವ ಅಳತೆ ಮಾಪಕಗಳ ಬಳಕೆ ಮಾಡಿರುವುದನ್ನು ನೋಡಬಹುದು. ಪ್ರಾಚೀನ ಕಾಲದ ನಾಣ್ಯಗಳಲ್ಲಿ ಪ್ರಸಿದ್ಧವಾದುದು ಗದ್ಯಾಣವೆಂಬ ನಾಣ್ಯ. ತಾಲೂಕಿನ ಧರಿಯಾಪುರ ಶಾಸನದಲ್ಲಿ ಗದ್ಯಾಣವೆಂಬ ನಾಣ್ಯದ ಕುರಿತು ಉಲ್ಲೇಖ ದೊರಕುತ್ತದೆ.

**ಸಗರನಾಡು–300/500:**

ಕೃಷ್ಣಾ–ಭೀಮಾ ನದಿಗಳ ನಡುವಿನ ನಾಡನ್ನು ಸಗರನಾಡು ಎಂದು ಕರೆಯಲಾಗಿದೆ. ಸಗರನಾಡಿನ ಸೀಮೆ ಇಂದಿನ ಶಹಾಪುರ, ವಡಗೇರಾ, ಸುರಪುರ, ಹುಣಸಗಿ ಮತ್ತು ಜೇವರ್ಗಿ ತಾಲೂಕನ್ನು ಒಳಗೊಂಡಿದ್ದು, ಇಂದಿನ ಸಗರ ಗ್ರಾಮ ಸಗರನಾಡಿನ ಕೇಂದ್ರಸ್ಥಾನವಾಗಿತ್ತು. ಸಗರನಾಡು ಪ್ರಾಚೀನ ಕಾಲದಲ್ಲಿ ಎಲ್ಲ ರಂಗದಲ್ಲಿ ಮಹತ್ವ ಪಡೆದ ಪ್ರದೇಶವಾಗಿತ್ತು. ಹಾಗಾಗಿ ಈ ಪ್ರದೇಶದ ಅನೇಕ ಶಾಸನಗಳಲ್ಲಿ ಸಗರನಾಡಿನ ಉಲ್ಲೇಖವಿರುವುದನ್ನು ನೋಡಬಹುದು.

ಕ್ರಿ.ಶ. 1051ರ ಭೀಮರಾಯನಗುಡಿಯ ಶಾಸನದಲ್ಲಿ "ಸಗರ 300 ರ ಬಳಿಯ ಎಡೆವಿಳಲ" ಎಂದಿದೆ. ಕ್ರಿ.ಶ. 1067ರ ಸಂಗಮ ಶಾಸನದಲ್ಲಿ "ಸಗರ ಮೂನೂಱಿ ಬಳಿಯ ಕೋಬಾಳ" ಎಂದಿದೆ. ಸಗರನಾಡು ಕ್ರಿ.ಶ. 927 ರಿಂದ 1106ರವರೆಗೆ ಮೂರುನೂರು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿತ್ತು. ಕ್ರಿ.ಶ. 1130 ರಿಂದ ಐದುನೂರು ಹಳ್ಳಿಗಳಿಗೆ ವಿಸ್ತರಿಸಿ ಈ ನಾಡಿನ ವ್ಯಾಪ್ತಿ ಜೇವರ್ಗಿ ತಾಲೂಕಿನವರೆಗೆ ವಿಸ್ತರಿಸಿರುವುದಕ್ಕೆ ಶಾಸನಾಧಾರಗಳು ದೊರಕುತ್ತವೆ. ಕ್ರಿ.ಶ. 12ನೆಯ ಶತಮಾನದ ಮರಮ್ ಕಲ್ ಶಾಸನದಲ್ಲಿ "ಸಗರವಯಿನೂಱುಂ ಬಾಡದ ಬಳಿಯ ಬಾಡಂ ಮೊರಂಬುಕಲ್ಲು" ಎಂದು, ಕ್ರಿ.ಶ. 1137ರ ಶಿರವಾಳ ಶಾಸನದಲ್ಲಿ "ಸಗರವಯ್ನೂಱುಂಬಾಡದ ಹೆರ್ಗ್ಗಡೆ ದಂಣ್ಡನಾಯಕಂ" ಎಂದು, ಕ್ರಿ.ಶ.1175ರ ಹೋತಪೇಟೆ ಶಾಸನದಲ್ಲಿ "ಸಗರವೈನೂಱು ಬಾಡದ ಬಳಿಯ ಬಾಡ ಹೋತುಗಲ್ಲು" ಎಂದಿದೆ. ಪ್ರಾರಂಭದಲ್ಲಿ ಮೂರುನೂರು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿದ್ದ ಸಗರ ಮುಂದೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡು ಐದುನೂರು ಹಳ್ಳಿಗಳಿಗೆ ಕೇಂದ್ರಸ್ಥಾನವಾಗಿ ಬದಲಾಗಿರುವುದನ್ನು ಗುರುತಿಸಬಹುದು. ಸಗರನಾಡಿನ ವ್ಯಾಪ್ತಿ ಮತ್ತು ಗಡಿಗಳನ್ನು ಗುರುತಿಸಲು ಇನ್ನು ಹೆಚ್ಚಿನ ಅಧ್ಯಯನಗಳ ಅವಶ್ಯಕತೆಯಿದೆ.

ಹೀಗೆ ಶಹಾಪುರ ತಾಲೂಕಿನ ಸಗರ, ಶಿರವಾಳ, ಭೀಮರಾಯನಗುಡಿ, ಮದ್ದರಕಿ, ಸಂಗಮ, ಮರಮಕಲ್, ಗೋಗಿ, ಹೋತಪೇಟೆ, ನಡಿಹಾಳ ಮುಂತಾದ ಶಾಸನಗಳು ಆ ಕಾಲದ ಸಾಹಿತ್ಯ, ರಾಜಕೀಯ, ಇತಿಹಾಸ, ಭಾಷೆ, ಸಮಾಜ, ಧರ್ಮ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದ್ದಾಗಿವೆ. ಈ ಶಾಸನ ಅಧ್ಯಯನಗಳ ಮೂಲಕ ಶಹಾಪುರ ತಾಲೂಕಿನ ಸಾಂಸ್ಕೃತಿಕ ಪರಂಪರೆಯನ್ನು ಅರಿಯಬಹುದಾಗಿದೆ.

## ಅಡಿಟಿಪ್ಪಣಿಗಳು:

1. ಹನುಮಾಕ್ಷಿ ಗೋಗಿ, (1995), ಕಲಬುರಗಿ ಜಿಲ್ಲೆಯ ಶಾಸನಗಳು, ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ, ಪು.ಸಂ. 17
2. ಅದೇ, ಪು.ಸಂ. 18
3. ಅದೇ, ಪು.ಸಂ. 399
4. ಅದೇ, ಪು.ಸಂ. 398
5. ಅದೇ, ಪು.ಸಂ. 427
6. ಅದೇ, ಪು.ಸಂ. 432
7. ಅದೇ, ಪು.ಸಂ. 391
8. ಅದೇ, ಪು.ಸಂ. 416

## ಪರಾಮರ್ಶನ ಗ್ರಂಥಗಳು:

1. ಹನುಮಾಕ್ಷಿ ಗೋಗಿ, (1995), ಕಲಬುರಗಿ ಜಿಲ್ಲೆಯ ಶಾಸನಗಳು, ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ.
2. ಗೋಪಾಲರಾವ್ ಹೆಚ್.ಎಸ್., (2019), ಶಾಸನ ಅಧ್ಯಯನ ಕೆಲ ಹೆಜ್ಜೆ ಗುರುತುಗಳು, ಅಭಿನವ ಪ್ರಕಾಶನ, ಬೆಂಗಳೂರು.
3. ಹನುಮಾಕ್ಷಿ ಗೋಗಿ, (1983), ವ್ಯಾಸಂಗ, ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ.
4. ಚಿದಾನಂದಮೂರ್ತಿ ಎಂ., (2015), ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.